**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 484/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ಪುಟ್ಟಬಸವ |
| ತಂದೆಯ ಹೆಸರು | : | ಪುಟ್ಟಮಾದಯ್ಯ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಚನ್ನಪಟ್ಟಣ ಟೌನ್. |

**ಸಾಕ್ಷಿಯನ್ನು ದಿನಾಂಕಃ 07.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ-3 ರವರ ಪರಿಚಯವಿರುತ್ತದೆ. ಅವರು ನಮ್ಮ ಊರಿನವರು. ಚಾಸಾ-4 ರಿಂದ ಚಾಸಾ-9 ರವರ ಪರಿಚಯವಿರುವುದಿಲ್ಲ. 2 ಮತ್ತು 3 ನೇ ಆರೋಪಿತರ ಪರಿಚಯವಿರುತ್ತದೆ. 2 ನೇ ಆರೋಪಿ ನನ್ನ ಹೆಂಡತಿ. 3 ನೇ ಆರೋಪಿ ನನ್ನ ಸ್ನೇಹಿತನಾದ ಚಾಸಾ-3 ರವರ ಹೆಂಡತಿ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. 1 ನೇ ಆರೋಪಿ ನನ್ನ ಹೆಂಡತಿಯಾದ 2 ನೇ ಆರೋಪಿಗೆ ಯಾವುದೇ ಮಗುವನ್ನು ಕಾನೂನು ಬಾಹಿರವಾಗಿ ನೀಡಲು ಪ್ರಯತ್ನಿಸಿರುವುದಿಲ್ಲ ಹಾಗು ನನ್ನ ಹೆಂಡತಿಯಾದ 2 ನೇ ಆರೋಪಿ ಯಾವುದೇ ಮಗುವನ್ನು ಕಾನೂನು ಬಾಹಿರವಾಗಿ ತೆಗೆದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

***(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ನನಗೆ 2 ನೇ ಆರೋಪಿಯ ಜೊತೆ ಮದುವೆಯಾಗಿ ಸುಮಾರು 19 ವರ್ಷಗಳಾದರೂ ಸಹ ಮಕ್ಕಳಾಗಿರುವುದಿಲ್ಲ. ಈ ಸಂಬಂಧ ನನ್ನ ಹೆಂಡತಿಯು 3 ನೇ ಆರೋಪಿಯ ಮನೆಗೆ ಹೋದಾಗ ಮಕ್ಕಳಾಗದ ವಿಚಾರವನ್ನು ಅವರಿಗೆ ತಿಳಿಸಿ, ಯಾರಾದರೂ ನನಗೆ ಮಕ್ಕಳನ್ನು ದಾನ ಮಾಡಿಕೊಟ್ಟರೆ ಸಾಕುವುದಾಗಿ ತಿಳಿಸಿದ್ದು, ಆಗ 3 ನೇ ಆರೋಪಿ ನನ್ನ ಹೆಂಡತಿಯಾದ 2 ನೇ ಆರೋಪಿಯನ್ನು ಸಮಾಧಾನ ಮಾಡಿ ಮುಂದೆ ಯಾರಾದರೂ ಮಕ್ಕಳನ್ನು ದಾನವಾಗಿ ಕೊಟ್ಟರೆ ತೆಗೆದುಕೊಂಡರಾಯಿತೆಂದು ಸಮಾಧಾನಪಡಿಸಿರುತ್ತಾರೆಂದರೆ ಸರಿಯಲ್ಲ. 1 ಹಾಗು 3 ನೇ ಆರೋಪಿಗಳು ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಾಗಿದ್ದು, ಒಂದೇ ಏರಿಯಾದಲ್ಲಿ ಬಾರಿಗೆ ಮನೆ ಮಾಡಿಕೊಂಡು ವಾಸವಿದ್ದು, ಕಷ್ಟ-ಸುಖವನ್ನು ಮಾತನಾಡಿಕೊಳ್ಳುವಾಗ 1 ನೇ ಆರೋಪಿಯು ತನ್ನ ಮನೆಯ ಪರಿಸ್ಥಿತಿಯನ್ನು 3 ನೇ ಆರೋಪಿಗೆ ತಿಳಿಸಿ ತನ್ನ ಗಂಡ ಮಧ್ಯಪಾನ ವ್ಯಸನಿಯಾಗಿದ್ದು, ಈಗಿರುವ ಮಕ್ಕಳನ್ನು ಹಾಗು ತನ್ನನ್ನು ಸರಿಯಾಗಿ ಸಾಕುತ್ತಿಲ್ಲ ಆದರೂ ಸಹ ತಾನು ಈಗಲೂ ಗರ್ಭವತಿಯಾಗಿರುವುದಾಗಿ ಹಾಗು ಮಗುವನ್ನು ಅಬಾರ್ಶನ್ ಮಾಡಿಸೋಣ ಎಂದರೆ ವೈದ್ಯರು ಆಗುವುದಿಲ್ಲವೆಂದು ತಿಳಿಸಿದ್ದು, ಯಾರಾದರೂ ಮಕ್ಕಳಿಲ್ಲದವರು ಮಗುವನ್ನು ಕೇಳಿದರೆ ಕೊಟ್ಟುಬಿಡುತ್ತೇನೆಂದು ಹೇಳಿರುತ್ತಾರೆಂದರೆ ಸರಿಯಲ್ಲ. ನಂತರ 3 ನೇ ಆರೋಪಿಯು ನನ್ನ ಹೆಂಡತಿಯಾದ 2 ನೇ ಆರೋಪಿಯನ್ನು 1 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿ ಮಗು ಹುಟ್ಟಿದ ಮೇಲೆ ಅದನ್ನು 2 ನೇ ಆರೋಪಿ ತನ್ನ ಹೆಂಡತಿಗೆ ದಾನವಾಗಿ ಕೊಡುವಂತೆ ಕೇಳಿದ್ದು, ಅದಕ್ಕೆ 1 ನೇ ಆರೋಪಿ ಒಪ್ಪಿಕೊಂಡಿರುತ್ತಾರೆಂದರೆ ಸರಿಯಲ್ಲ. ಅದರಂತೆ ದಿನಾಂಕಃ 05.04.2022 ರಂದು 1 ನೇ ಆರೋಪಿಯು ಹೆಣ್ಣು ಮಗುವಿಗೆ ಜನ್ಮ

ನೀಡಿದ್ದು, ದಿನಾಂಕಃ 07.04.2022 ರಂದು 1 ನೇ ಆರೋಪಿಯು ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ಬಂದಿದ್ದು, ಅದೇ ದಿನ 1 ನೇ ಆರೋಪಿಯು ಕಾನೂನು ಬಾಹಿರವಾಗಿ ಸದರಿ ಮಗುವನ್ನು ತನ್ನ ಹೆಂಡತಿಯ ಮಡಿಲಿಗೆ ಹಾಕಿ ಚೆನ್ನಾಗಿ ನೋಡಿಕೊಳ್ಳುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ನಂತರ ಈ ಬಗ್ಗೆ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದಿನಾಂಕಃ 15.04.2022 ರಂದು ಈ ಎಲ್ಲಾ ಸಂಗತಿಗಳ ಬಗ್ಗೆ "ನನಗೆ ಮದುವೆಯಾಗಿ 19 ವರ್ಷ ಕಳೆದರೂ

------------------------------------------

ತೆಗೆದುಕೊಳ್ಳಲು ಪ್ರಯತ್ನಿಸಿರುವುದು ತಪ್ಪಾಗಿರುತ್ತದೆ." (ಹೇಳಿಕೆಯ ಸಂಪೂರ್ಣ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ) ಎಂಬಂತೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಭಾಗವನ್ನು **ನಿ.ಪಿ.-3** ಎಂದು ಗುರುತಿಸಲಾಯಿತು. ಮೇಲೆ ಹೇಳಿದಂತೆ ಪ್ರಕರಣದ ಎಲ್ಲಾ ವಿಚಾರಗಳು ಗೊತ್ತಿದ್ದಾಗ್ಯೂ ಸಹ 2 ನೇ ಆರೋಪಿ ನನ್ನ ಹೆಂಡತಿಯಾಗಿದ್ದು, 1 ಹಾಗು 3 ನೇ ಆರೋಪಿಗಳು ನಮ್ಮ ಊರಿನವರಾದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.</u>**

**<u>ಮರುವಿಚಾರಣೆ</u>**: ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**